5. ಪ್ರಕಟಣೆ :

ಅ) ವಿಷಯ : 2007ನೇ ಸಾಲಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ವಿಧಾನ ಪರಿಷತ್ತು ಅಂಗೀಕರಿಸಿರುವುದರ ಬಗ್ಗೆ.

ಉಪಾಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು **2007ನೇ ಸಾಲಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು** 31ನೇ ಜುಲೈ, 2007ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಯಿತೆಂದು ತಿಳಿಸಿರುತ್ತಾರೆ.

ಆ) ವಿಷಯ : ದಿನಾಂಕ : 31–07–07 ರಂದು ಕರೆಯಲಾಗಿದ್ದ ಎಲ್ಲಾ ಶಾಸಕರುಗಳ, ಸಂಸತ್ ಸದಸ್ಯರುಗಳ ಸಭೆಯನ್ನು ಮುಂದೂಡಿರುವ ಬಗ್ಗೆ.

ಉಪಾಧ್ಯಕ್ಷರು : ಕಾವೇರಿ ಜಲಾನಯನ ಪ್ರದೇಶದ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಅನುಷ್ಠಾನ ಕುರಿತಂತೆ ಚರ್ಚೆಸಲು ಇಂದು, ಮಂಗಳವಾರ ದಿನಾಂಕ: 31–07–2007 ರಂದು ಸಂಜೆ 4.30 ಗಂಟೆಗೆ ಗೃಹ ಕಛೇರಿ, ಕೃಷ್ಣಾದಲ್ಲಿ ಕರೆಯಲಾಗಿರುವ ಎಲ್ಲಾ ಶಾಸಕರುಗಳು, ಸಂಸತ್ ಸದಸ್ಯರುಗಳ ಸಭೆಯನ್ನು ಅನಿವಾರ್ಯ ಕಾರಣಗಳಿಂದಾಗಿ ಮುಂದೂಡ ಲಾಗಿದೆ. ಸಭೆಯ ಮುಂದಿನ ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ಈ ಸಭೆಯ ಮುಂದೂಡಿಕೆಯಿಂದಾಗಿ ಆಗುವ ಅನಾನುಕೂಲತೆಗೆ ವಿಷಾದಿಸಲಾಗಿದೆಯೆಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿರುತ್ತಾರೆ.

ಶ್ರೀ ಹೆಚ್.ಕೆ.ಪಾಟೀಲ್‌ರವರು ಈ ದಿವಸ ಮಧ್ಯಾಹ್ನ ಒಂದೂವರೆ ಗಂಟೆಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಊಟದ ವ್ಯವಸ್ಥೆಯನ್ನು ಮಾಡಿರುತ್ತಾರೆ. ಎಲ್ಲಾ ಸದಸ್ಯರೂ ಊಟಕ್ಕೆ ಹೋಗಬೇಕೆಂದು ಈ ಮೂಲಕ ಅವರು ಕೋರಿದ್ದಾರೆ.